ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಎ7/ಎಲ್ಎನ್‌ಡಿ/ಗ್ರೀನ್‌ಕೋ/ಸಿಆರ್– /2020–21

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ:11–05–2021

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಘಟಪ್ರಭಾ ವಿಭಾಗ,
ಗೋಕಾಕ.

ವಿಷಯ: Diversion of 160.40 ha. of Forest Land for Construction of 1260 MW Standalone Pumped Storage Project being development by M/S Greenko Solar Energy Private Ltd. (GSEPL) Proposal No. FP/KA/HYD/37723/2018 reg.

ಉಲ್ಲೇಖ: ನಿಮ್ಮ ಕಛೇರಿ ಪತ್ರ ಸಂಖ್ಯೆ: ಬಿ2/ಭೂಮಿ/ಗ್ರೀನ್‌ಕೋ/ಎಫ್‌ಸಿ/2020–21 ದಿನಾಂಕ: 30–06–2020.

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಗ್ರೀನ್‌ಕೋ ಸೋಲಾರ್ ಎನರ್ಜಿ ಪ್ರೈವೇಟ್ ಲಿಮಿಟೆಡ್, ಬೈಲಹೊಂಗಲ ಇವರಿಗೆ ಸವದತ್ತಿ ತಾಲೂಕಿನ ಕಾರ್ಲಕಟ್ಟಿ, ಚಕ್ರಗೇರಿ ಹಾಗೂ ಕಾಗಿಹಾಳ ಗ್ರಾಮದಲ್ಲಿ ಒಟ್ಟು 160.40 ಹೆ. ಅರಣ್ಯ ಪ್ರದೇಶವನ್ನು 1260 ಮೆ.ವ್ಯಾ. ನಿರ್ಮಾಣಕ್ಕಾಗಿ ಅರಣ್ಯ ಭೂಮಿಯನ್ನು ಹಂಚಿಕೆ ಮಾಡುವ ಕುರಿತು ದಿನಾಂಕ: 03–05–2021 ರಂದು ಸ್ಥಾನಿಕವಾಗಿ ಪರಿಶೀಲಿಸಿದ್ದು, ಸದರಿ ಪ್ರಸ್ತಾವಣೆಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಈ ಕೆಳಗಿನ ಮಾಹಿತಿಯು ಅವಶ್ಯವಾಗಿರುತ್ತದೆ.

1) ಕಾರ್ಲಕಟ್ಟಿ ಗ್ರಾಮದ ಅ.ಸಂ.ನಂ: 146 ರಲ್ಲಿ ಪುನರ್ ವಸತಿ ಸೌಲಭ್ಯಕ್ಕಾಗಿ ಹಂಚಿಕೆ ಮಾಡಲಾದ ಅರಣ್ಯ ಪ್ರದೇಶದಲ್ಲಿ ಕೋಳಿ ಪಾರ್ಮ್ ಮತ್ತು ಪೆಟ್ರೋಲ್ ಬಂಕ್ ಅಳವಡಿಸಿರುವುದು ಕಂಡುಬಂದಿದ್ದು, ಸದರಿ ಪ್ರದೇಶ ಉಪಯೋಗಿ ಸಂಸ್ಥೆಯವರು ಯೋಜನಾ ವ್ಯಾಪ್ತಿಯಲ್ಲಿ ಬರುತ್ತದೆಯೋ ಅಥವಾ ಇಲ್ಲ ಎಂಬ ಬಗ್ಗೆ ವರದಿ ಸಲ್ಲಿಸುವುದು.
2) ಉಪಯೋಗಿ ಸಂಸ್ಥೆಯವರು ಪ್ರಸ್ತಾಪಿಸಿರುವ ಪ್ರದೇಶದಿಂದ ಸೊಗಲ ಸೋಮೇಶ್ವರ ದೇವಸ್ಥಾನ ಮತ್ತು ಸೊಗಲ ಜಲಪಾತ ಇರುವ ವಾಯುದೂರ ಎಷ್ಟು ಎಂಬುದನ್ನು ವರದಿ ಸಲ್ಲಿಸುವುದು.
3) ಉಪಯೋಗಿ ಸಂಸ್ಥೆಯವರು ಪ್ರಸ್ಥಾಪಿಸಿರುವ ಪ್ರದೇಶವು ಈ ಹಿಂದೆ ಬೇರೆ ಯೋಜನೆಗಳಿಗೆ ಹಂಚಿಕೆ ಮಾಡದೇ ಇರುವ ಬಗ್ಗೆ ವರದಿ ಸಲ್ಲಿಸುವುದು.
4) ವಿಶೇಷ ಭೂಸ್ವಾಧೀನ ಅಧಿಕರಿಗಳು ಸೌದತ್ತಿ ಇವರ ಆದೇಶಗಳು ದಿನಾಂಕ:08–03–1975 ಮತ್ತು 19–09–1975 ರಲ್ಲಿ ಪಹಣಿ ಪತ್ರಿಕೆಗಳಲ್ಲಿ ಪ್ರಸ್ತಾಪಿತ ಅರಣ್ಯ ಪ್ರದೇಶದಲ್ಲಿ ನಮೂದಿಸಿದ ಖಾಸಗಿ ಜನರ ಹೆಸರುಗಳು ಮತ್ತು ಉಪಯೋಗಿಸುತ್ತಿರುವ ಅರಣ್ಯ ಕ್ಷೇತ್ರದ ವಿವರಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ವರದಿ ಸಲ್ಲಿಸುವುದು.

ಪ್ರಸ್ತಾವನೆಯನ್ನು DSMFCP ಗೆ ವಾಪಸ್ಸಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ.